ಬರ್ತದೆ. ತಂದೆಯವರೂ ಈಗಿಲ್ಲ; ಹೋಗಿ ಹತ್ತುವರ್ಷ ಆಯ್ತು.'

'ಥೊ! ಹೌದ? ಒಳ್ಳೇಜನ ಆಗಿದ್ರು...' ಏನೋ ನೆನಪಿಸಿಕೊಂಡವ, '...ನಾವೂ ಆ ಕಡೆ ಹೋಗಲಿಲ್ಲ; ಸುಮಾರು ಕಾಲಾಯ್ತು. ತವರ, ಕಸ್ತ್ರ ಎಲ್ಲ ಇಪರೀತ ದುಬಾರೀರ. ಸಂತೆದಿನ ಪೋಸ್ಟಾಫೀಸೆದುರಿಗೆ ದಾರಿಲೇ ರಾಶಿಹಾಕ್ಕಂಡು ಮಾರತಿದ್ರು; ಈಗ ಎಲ್ಲದೆ? ಹಾಗೆ ನೋಡಿದ್ರೆ ಈಗ ಕಲಾಯಿ ಹಾಕ್ಸವರೆ ಇಲ್ಲರಾ. ಅಬ್ಬು ಕಾಲಕ್ಕೆ ಅದೆಲ್ಲ ಮುಗ್ದೋಯ್ತು' ಅಂದ ಬೇಸರದಿಂದ. 'ಅದ್‌ಹೌದು... ಆದ್ರೆ ಎರಡು ವರ್ಷ ಹಿಂದೆ ಸುಮಾರು ಹುಡುಕಿದ್ದೆ; ಒಂದಿಷ್ಟು ಹಳೇ ಪಾತ್ರೆಗೆ ಕಲಾಯಿ ಹಾಕಿಸ್ವಾ ಹೇಳಿ ಉಮೇದು ಬಂದಿದ್ದಕ್ಕೆ. ಬಿಡು, ಈಗ ಎಂತಾ ಮಾಡತಾ ಇದ್ಯೋ ನೀನೂ?' ಖಾಲಿ ಗ್ಲಾಸು ಕೆಳಗಿಟ್ಟು ಬಾಯಿ ಒರೆಸಿಕೊಂಡರು. 'ಅದೂ ಇದೂ ಚಿಲ್ಲರೆ ವ್ಯಾಪಾರ ನಡಿತದ್ರಿ; ಅಲೆದಾಡತಿರಬೇಕು' ಅಂದ ನಿರುತ್ಸಾಹದಲ್ಲಿ. ಮುಕುಂದರಾಯರೆದ್ದವರು ಅವನು ಬೇಡವೆಂದರೂ ಮುಸಂಬಿರಸ ಕುಡಿಸಿ, ಬಿಲ್ಲು ಕೊಟ್ಟು, 'ಸಿಗತೇನೆ ಆಯ್ತಾ? ಐದುಗಂಟೆ ಬಸ್ಸಿಗೆ ಹೋಗಬೇಕು, ಈಗ ಸ್ವಲ್ಪ ಕೆಲ್ಸ ಉಳದದೆ' ಅನ್ನುತ್ತ ಹೊರಬಿದ್ದರು.

ಸೊಸೈಟಿಗೆ ಭೆಟ್ಟಿ ಕೊಡುವುದು ಅವರಿವರ ಹತ್ತಿರ ಮಾತಾಡುವುದು, ಅಡಕೆ ರೇಟು, ಇತ್ತೀಚಿನ ಮಾಹಿತಿ, ಹೀಗೆ ಕೆಲಸ ಅಂದರೆ ಕೆಲಸವಲ್ಲ; ಏನೂಅಲ್ಲ ಅಂತಲು ಅಲ್ಲ. ಖಾನಾವಳಿಯಲ್ಲಿ ಊಟ, ಸೊಸೈಟಿ ಮೆತ್ತಿನಮೇಲೆ ಗ್ರಾಹಕರಿಗಾಗೆ ಹಾಸಿಡುವ ಜಮಖಾನೆಯಮೇಲೆ ಸ್ವಲ್ಪ ಅಡ್ಡಾಗಿ ವಿಶ್ರಾಂತಿಯಾಯಿತು. ಬಸ್‌ಸ್ಟ್ಯಾಂಡಿಗೆ ಬಂದವರಿಗೆ ಅನೇಕಾನೇಕ ಅಡ್ಡತಿಡ್ಡ ನಿಂತ ಬಸ್ಸುಗಳ ನಡುವೆ ಆ ಬೋರ್ಡು ಕಂಡಿತು. ಧಾವಿಸಿ, ಬಾಗಿಲಲ್ಲಾಗಲೆ ಮುತ್ತಿಕೊಂಡ ಜನರ ಪಡಕಿನಲ್ಲಿ ತೂರಿಸಿಕೊಂಡು ತರಕಾರಿಯ, ಬೆವರಿನ, ತಂಬಾಕಿನ, ಗುಟ್ಕಾದ, ಮಲ್ಲಿಗೆಹೂವಿನ ತರಹಾವರಿ ವಾಸನೆಗಳನ್ನು ಅನುಭವಿಸುತ್ತ ಅಷ್ಟಷ್ಟಾಗಿ ಒಳಗೆ ಸೇರುತ್ತ ಮೂಲೆಯೊಂದಕ್ಕೆ ಒತ್ತರಿಸಲ್ಪಟ್ಟರು. ಎಡಕ್ಕೆ ಬಲಕ್ಕೆ ತಿರುಗಿಕೊಳ್ಳುವ ಅನುಭವದಿಂದಲೆ ಬಸ್ಸೀಗ ಇಂತಿಂತ ಜಾಗೆಗೆ ಬಂತು ಅಂತ ಊಹಿಸುತ್ತ ಒಂದೆಡೆ ಜನ ಅಡಬರಿಸಿ ಚೀಲ ಮೂಟೆಗಳನ್ನು ಬರಗಿಕೊಂಡು, ನಿತ್ತವರೆಲ್ಲ ಖಾಲಿಯಾಗಿ, ಭೂಮಿಯಮೇಲೆ ಗಾಳಿಯಿನ್ನೂ ಉಳಿದಿರುವುದರ ಅನುಭವವಾಗುತ್ತಿದ್ದಂತೆ ಇದು ಬಂಡೆಹಳ್ಳಿ ಕ್ರಾಸು ಅನ್ನುವುದು ವೇದ್ಯವಾಗಿ, ಅಬ್ಬ... ಈ ಸುಡುಗಾಡು ಬಸ್‌ಪ್ರಯಾಣ ಇವತ್ತಿಗೇ ಸಾಕು ಅಂತ ಉದ್ಗರಿಸಿದರು. ಮರುಕ್ಷಣ, ಪದೇಪದೇ ಪುನರ್ಜನ್ಮದ ಸಂಕಟಕ್ಕೊಳಗಾದರೂ ಪೇಟೆಗೆ ಪ್ರತಿವಾರ ಹೋಗುವುದನ್ನು ವ್ರತದಂತೆ ಪಾಲಿಸುವ ತಾನು ನಿಲ್ಲಿಸಲಾರೆನೇನೋ ಅನಿಸುವಾಗ ಖಾಲಿಯಾದ ಸೀಟೊಂದು ಕಾಣಿಸಿ ಕುಳಿತುಕೊಳ್ಳಲು ಸಿಕ್ಕಿತು. ಹತ್ತುನಿಮಿಷಕ್ಕೆ ಕತ್ಲಗಾನಿಂದ ಆಡಳ್ಳಿಗೆ ದಾರಿ ತಿರುಗಿಕೊಳ್ಳುವ ಏರಿಯಮೇಲೆ ಬಸ್ಸು ನಿತ್ತಿತು.

ತಮ್ಮಹಿಂದೇ ಇಳಿದವನನ್ನು ಈಗಷ್ಟೆ ಗಮನಿಸಿದವರು ಆಶ್ಚರ್ಯದಿಂದ, 'ಅರೆ ನೀನು ಇದೇ ಬಸ್ಸಲಿದ್ಯೇನೋ? ಎಲ್ಲಿಗೆ ಹೊರಟವ?...' ಕೇಳಿದ್ದಕ್ಕೆ ಅಕ್ರಾಂ, 'ನಿಮ್ಮನೆಗೇ ಬಂದೆ' ಅಂದ. ವಿನಾಕಾರಣ ತಲೆ ಕೆರೆದುಕೊಳ್ಳುತ್ತ ಮುಗುಳ್ನಗೆ ಅರಳಿಸಿ, 'ಅದೇ... ಆವಾಗ ಹೇಳದ್ರಿ... ಕಲಾಯಿ ಮಾಡೋ ಕೆಲ್ಸಕ್ಕೆ ಹುಡುಕಾಡದೆ ಅಂತ. ಮಾಡಿಕೊಟ್‌ಬಿಡುವ ಅನುಸ್ತು...' ಅಂದ. ಪೇಟೆಯಲ್ಲಿ ತಾನಾಡಿದ್ದು ನೆನಪಾಗಿ ಅಚ್ಚರಿಯಿಂದ ಅವನ ಕೈಯಲ್ಲಿದ್ದ ದೊಡ್ಡ ಗಂಟನ್ನು ವೀಕ್ಷಿಸಿದರು. ಒಂದುಕ್ಷಣ ಅನಿಶ್ಚಿತತೆಯನ್ನನುಭವಿಸಿದವರು, 'ಸರಿ ಹಾಗಿದ್ರೆ... ಬಾ' ಅಂದು, ತೋಟದ ತಗ್ಗಿಗಿಳಿಯುವ ಕಾಲುದಾರಿಯಲ್ಲಿ ಹೆಜ್ಜೆ ಹಾಕಿದರು.

ಚಾಲಿಯಡಕೆಯೆಲ್ಲ ಸುಲಿದು ಖಾಲಿಯಾಗಿರುವ ಕೊಟ್ಟಿಗೆಪಕ್ಕದ ಕೋಣೆಯಲ್ಲಿ ಅವನ ಗಂಟನ್ನಿಡಲು ಹೇಳಿದರು. 'ನಿತ್ಯ ಪೇಪರಲ್ಲಿ ಸಮಾಚಾರ ಒಂದಲ್ಲ ಒಂದು ಓದತೀರಿ. ಈಗ ಕಲಾಯಿ ಹಾಕದೆಂತದಿತ್ತು ಅರ್ಜೆಂಟು? ಯಾರ್‍ಯಾರೋ ಹುಡಿಕ್ಕಂಡು ವಿಚಾರಣೆ ಮಾಡಲಿಕ್ಕೆ